ದೇವರನಾಮ: ಅಪಮೃತ್ಯು ಪರಿಹರಿಸೊ ಅನಿಲದೇವ

ರಚನೆ: ಶ್ರೀ ಜಗನ್ನಾಥ ದಾಸರು

ರಾಗ: ಕಾಂಬೋದಿ

ತಾಳ: ಝಂಪೆ

ಅಪಮೃತ್ಯುಪರಿಹರಿಸೊ ಅನಿಲದೇವ
ಕೃಪಣವತ್ಸಲನೆ ಕಾವರ ಕಾಣೆ ಜಗದೊಳಗೆ||ಪ||

ನಿನಗಿನ್ನುಸಮರಾದ ಅನಿಮಿತ್ತ ಬಾಂಧವರು
ಎನಗಿಲ್ಲಆವಾವ ಜನುಮದಲ್ಲಿ
ಅನುದಿನವುಎಮ್ಮ ನೀನುದಾಸೀನ ಮಾಡುವುದು
ಅನುಚಿತವುಜಗದಿ ಸಜ್ಜನ ಶಿಖಮಣಿಯೆ||೧||

ಕರುಣಾಭಿಮಾನಿಗಳುಕಿಂಕರರು ಮೂಲೋಕ
ಧೊರೆನಿನ್ನೊಳಗಿಪ್ಪ ಸರ್ವಕಾಲ
ಪರಿಸರನೆಈ ಭಾಗ್ಯ ಧೊರೆತನಕೆ ಸರಿಯುಂಟೆ
ಗುರುವರನೆನೀ ದಯಕರನೆಂದು ಬಿನ್ನೈಪೆ
(ಗುರುವರನೆನೀ ಕೃಪಕರನೆಂದು ಪ್ರಾರ್ಥಿಸಿದೆ)||೨||

ಭವರೋಗಮೋಚಕನೆ ಪವಮಾನರಾಯ ನಿ-
ನ್ನವರವನುನಾನು ಮಾಧವ ಪ್ರಿಯನೆ
ಜವನಬಾಧೆಯ ಬಿಡಿಸು ಅವನಿಯೊಳು ಸುಜನರಿಗೆ
ದಿವಿಜಗಣಮಧ್ಯದೊಳು ಪ್ರವರ ನೀನಹುದೊ||೩||

ಜ್ಞಾನಾಯು ರೂಪಕನು ನೀನಹುದೊ ವಾಣಿ ಪಂ-
ಚಾನನಾದ್ಯಮರರಿಗೆಪ್ರಾಣದೇವ
ದೀನವತ್ಸಲನೆಂದುನಾ ನಿನ್ನ ಮೊರೆಹೊಕ್ಕೆ
ದಾನವಾರಣ್ಯಕೃತಾನು ಸರ್ವದಾ ಎಮ್ಮ||೪||

ಸಾಧನಶರೀರವಿದು ನೀ ದಯದಿ ಕೊಟ್ಟದ್ದು
ಸಾಧರಣವಲ್ಲಸಾಧು ಪ್ರಿಯನೆ
ವೇದವಾದೋತಿತಜಗನ್ನಾಥವಿಠಲನ
ಪಾದಭಜನೆಯನಿತ್ತು ಮೋದ ಕೊಡು ಸತತ||೫||